# ದಾನಕ್ಕಾಗದ್ದು ಕಾಡು ಪಾಲಾಯ್ತು



ಈಸೋಪನ ಕಥೆ

ಶಿವಪುರದಲ್ಲಿ ನಂಜುಂಡಯ್ಯ ಎಂಬ ಒಬ್ಬ ಶ್ರೀಮಂತ ಜಮೀನ್ದಾರನಿದ್ದ. ಅವನ ಜಮೀನಿನಲ್ಲಿ ಕೆಲಸ ಮಾಡುವ ರಂಗಪ್ಪ ತುಂಬಾ ಪ್ರಾಮಾಣಿಕ ವ್ಯಕ್ತಿಯಾಗಿದ್ದ. ಎಷ್ಟೋ ವರ್ಷಗಳ ಹಿಂದೆ ರಂಗಪ್ಪನು ನಂಜುಂಡಯ್ಯನ ಬಳಿ ಸಾಲ ಮಾಡಿದ್ದನ್ನು ತೀರಿಸಲಾರದೇ ಬಡ್ಡಿ ಮೇಲೆ ಬಡ್ಡಿ ಬೆಳೆದಿತ್ತು. ಮಾಡಿದ ಸಾಲ ತೀರಿಸಲು ಜೀವನವಿಡೀ ನಂಜುಂಡಯ್ಯನ ಜಮೀನಿನಲ್ಲಿಯೇ ದುಡಿದೂ ದುಡಿದು ಬಡಕಲಾಗಿದ್ದನು.

ಬಡವರು, ಕೂಲಿ ಕಾರ್ಮಿಕರು ಎಂದರೆ ನಂಜುಂಡಯ್ಯನಿಗೆ ಅತ್ಯಂತ ತಿರಸ್ಕಾರದ ಭಾವನೆ. ಕೆಲಸ ಮಾಡುವವರನ್ನು ಕಾಲ ಕಸದಂತೆ ನೋಡುತ್ತಿದ್ದ. ನಂಜುಂಡಯ್ಯನಿಗೆ ಪಿತ್ರಾರ್ಜಿತವಾಗಿ ಬಂದ ಭಾರೀ ಆಸ್ತಿಪಾಸ್ತಿ ಇದ್ದಿದ್ದರಿಂದ ಆತನ ಸೊಕ್ಕು ಗಗನಕ್ಕೇರಿತ್ತು.

ನಂಜುಂಡಯ್ಯ ಏನೇ ಹೇಳಿದರೂ ಬೇಸರಿಸದೇ ರಂಗಪ್ಪನು ನಿಯತ್ತಿನಿಂದಲೇ ಕೆಲಸ ನಿರ್ವಹಿಸುತ್ತಿದ್ದ. ಒಡೆಯನ ತೋಟದಲ್ಲಿರುವ ವಿವಿಧ ಹಣ್ಣಿನ ಗಿಡಗಳನ್ನೂ ಮತ್ತು ಫಸಲನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದ. ಕಳ್ಳಕಾಕರಿಂದ, ಪ್ರಾಣಿ ಪಕ್ಷಿಗಳಿಂದ ಬೆಳೆಗಳನ್ನು ರಕ್ಷಿಸಿ ಫಸಲು ಧಣಿಯ ಕೈಸೇರುವಲ್ಲಿ ರಂಗಪ್ಪನ ಪಾತ್ರ ಹಿರಿದು.

ನಂಜುಂಡಯ್ಯನ ತೋಟದಲ್ಲಿಯೇ ವಾಸವಾಗಿದ್ದ ರಂಗಪ್ಪನ ಮನೆಯ ಪಕ್ಕದಲ್ಲಿ ಒಂದು ಬಾಳೆಗೊನೆ ಬೆಳೆದು ನಿಂತಿತ್ತು. ರಂಗಪ್ಪನ ಮಗ ಸೋಮನು ದಿನಾ ಆ ಬಾಳೆಗೊನೆಯನ್ನು ನೋಡುತ್ತ 'ಅಮ್ಮಾ ಈ ಬಾಳೆಗೊನೆ ಯಾವಾಗ ಹಣ್ಣಾಗುತ್ತದಮ್ಮಾ' ಎಂದು ಆಸೆಯಿಂದ ಕೇಳುತ್ತಲಿದ್ದ

'ಇನ್ನು ಕೆಲವೇ ದಿವಸದಲ್ಲಿ ಹಣ್ಣಾಗುತ್ತದೆ ಕಂದಾ. ಆದರೆ ಇದು ನಮ್ಮದಲ್ಲ. ಅದಕ್ಕೆ ಆಸೆ ಪಡಬೇಡ' ಎಂದಳು ತಾಯಿ.

'ಅಮ್ಮಾ ತೋಟದ ತುಂಬಾ ಬಹಳಷ್ಟು ಬಾಳೆಗೊನೆಗಳಿವೆ. ಆದರೆ ಈ ಒಂದು ಗೊನೆಯು ಮಾತ್ರ ನನಗೆ ಬೇಕೇ ಬೇಕು' ಎಂದು ಸೋಮ ಹಠ ಹಿಡಿದ.

ಮಗನ ಆಸೆಯಂತೆ ಆ ಬಾಳೆಗೊನೆಯನ್ನು ತಮಗೇ ಉಳಿಸಿಕೊಳ್ಳಲು ರಂಗಪ್ಪ ನಿರ್ಧರಿಸಿದ. ಆದರೆ ಅದಕ್ಕೆ ಸಾಹುಕಾರರ ಒಪ್ಪಿಗೆ ಪಡೆಯಲು ಮುಂದಾದ. ನಂಜುಂಡಯ್ಯನ ಬಳಿ ಬಂದು 'ಸಾಹುಕಾರರೇ ನಮ್ಮ ಮನೆಯ ಪಕ್ಕದಲ್ಲಿ ಬಲಿತ ಬಾಳೆಗೊನೆಯನ್ನು ಕಂಡ ನನ್ನ ಮಗ ಸೋಮ ತುಂಬ ಆಸೆ ಪಟ್ಟಿದ್ದಾನೆ. ದಯಮಾಡಿ ಅದನ್ನು ನಮಗೇ ಕೊಡುವಿರಾ'? ಎಂದು ದೈನ್ಯತೆಯಿಂದ ಕೇಳಿದ.

'ಏನು! ನನ್ನ ತೋಟದ ಬಾಳೆಕಾಯಿ ನಿನಗೆ ಬೇಕಾ? ಉಚಿತವಾಗಿ ಬೇಡಲು ನಿನಗೆಷ್ಟು ಧೈರ್ಯ? ಬೇಕಾದರೆ ಹಣ ಕೊಟ್ಟೇ ಖರೀದಿಸು. ಸುಮ್ಮ ಸುಮ್ಮನೆ ಕೊಡೋಕೆ ನಾನು ದಾನ ಧರ್ಮಕ್ಕೆ ನಿಂತವನಲ್ಲ. ಆಸೆಗೂ ಒಂದು ಮಿತಿ ಇರಲಿ. ಹೊಟ್ಟೆಗಿಲ್ಲದಿದ್ದರೆ ಗಂಜಿನಾದ್ರೂ ಕುಡಿದು ಬದುಕಬೇಕು. ಕಂಡವರಲ್ಲಿ ಬೇಡುವುದಲ್ಲ. ಬಾಳೆಗೊನೆ ಕೊಡುವುದಿಲ್ಲ. ನಡೆ ಕೆಲಸಕ್ಕೆ' ಎಂದು ಗದರಿಸಿ ಹೀಯಾಳಿಸಿದ ನಂಜುಂಡಯ್ಯ.

ರಂಗಪ್ಪನಿಗೆ ತುಂಬಾ ದುಃಖವಾಯಿತು. ಸೀದಾ ಮನೆಗೆ ಬಂದ ರಂಗಪ್ಪನು ಹೆಂಡತಿ ರಾಧಾಳನ್ನು ಕರೆದು ನಡೆದ ಘಟನೆಯನ್ನೆಲ್ಲಾ ಚಾಚೂ ತಪ್ಪದಂತೆ ವಿವರಿಸಿದ. ಆಗವಳು 'ರೀ.. ನಿಮ್ಮ ಪ್ರಾಮಾಣಿಕ ದುಡಿಮೆಗೆ ಸಿಗುವ ಪ್ರತಿಫಲ ಇದೇನಾ? ನಾವು ಒಂದು ವಾರ ಈ ಮನೆಯ ಕೆಲಸಕ್ಕೆ ರಜೆ ಹಾಕಿ ಊರಿಗೆ ಹೋಗಿ ಬರೋಣ. ಆಗ ನಮ್ಮ ಬೆಲೆ ಏನು ಎಂಬುದು ಈ ಸಾಹುಕಾರನಿಗೆ ತಿಳಿಯಲಿ' ಎಂದಳು. ಅಂತೆಯೇ ರಂಗಪ್ಪ, ರಾಧಾ ಮತ್ತು ಸೋಮು ಸೇರಿ ಊರಿಗೆ ತೆರಳಿದರು.

ಕಾಡು ಪ್ರಾಣಿಗಳು ಸಹ ಇದೇ ಸಂದರ್ಭಕ್ಕಾಗಿ ಹೊಂಚು ಹಾಕಿ ಕುಳಿತಿದ್ದವು. ತೋಟದ ಕಾವಲುಗಾರನೇ ಇಲ್ಲ ಅಂದ ಮೇಲೆ ಅವಕ್ಕೇನು ಹೆದರಿಕೆ. ಕೋತಿಗಳ ದಂಡು, ಹಂದಿಗಳ ಹಿಂಡು, ಕಾಡು ಬೆಕ್ಕುಗಳ ಸಮೂಹವು ಲಗ್ಗೆಯಿಟ್ಟವು ನಂಜುಂಡಯ್ಯನ ತೋಟಕ್ಕೆ. ಹಣ್ಣು, ತರಕಾರಿಗಳು, ಭತ್ತ, ಬಾಳೆ, ಅನಾನಸ್, ಪಪ್ಪಾಯಿ, ತೆಂಗು, ಅಡಿಕೆ ಮತ್ತು ಹೂವಿನ ಗಿಡಗಳನ್ನು ತಿಂದವು. ಬುಡ ಸಹಿತ ಮುಕ್ಕಿದವು. ಒಂದು ವಾರದಲ್ಲಿ ತೋಟ ಸರ್ವನಾಶವಾದಂತಾಗಿತ್ತು. ನಂಜುಂಡಯ್ಯ ಕಾಡು ಪ್ರಾಣಿಗಳನ್ನು ಓಡಿಸಲು ಶತ ಪ್ರಯತ್ನಪಟ್ಟು ವಿಫಲನಾಗಿದ್ದನು.

ರಂಗಪ್ಪನ ಕುಟುಂಬದ ಅವಶ್ಯಕತೆ ಎಷ್ಟು, ರಂಗಪ್ಪನ ಕೆಲಸದ ಮಹತ್ವ ಏನು ಎಂಬುದು ಈಗ ನಂಜುಂಡಯ್ಯನ ಗಮನಕ್ಕೆ ಬಂದಿತ್ತು. ತಾನು ಅವನನ್ನು ಕೀಳಾಗಿ ಕಂಡಿದ್ದಕ್ಕೆ ಪಶ್ಚಾತ್ತಾಪ ಪಟ್ಟನು. ರಂಗಪ್ಪ ಊರಿನಿಂದ ಬರುವವರೆಗೂ ತೋಟವನ್ನು ಕಾಯುತ್ತಿದ್ದ ನಂಜುಂಡಯ್ಯ ಅವನಲ್ಲಿ ಕ್ಷಮೆ ಕೋರಿದನು. 'ನೀನಿಲ್ಲದ ಒಂದು ವಾರದಲ್ಲಿ ನನಗೆ ಲಕ್ಷಾಂತರ ರೂಪಾಯಿ ನಷ್ಟವಾಯಿತು. ರಂಗಪ್ಪಾ ನಿನ್ನಂಥ ನಂಬಿಗಸ್ಥ ಸಹಾಯಕನಿದ್ದರೆ ಮಾತ್ರ ತೋಟದಲ್ಲಿ ಬೆಳೆ ಉಳಿಯಲು ಸಾಧ್ಯ. ದಯವಿಟ್ಟು ನನ್ನ ತೋಟವನ್ನು ಬಿಟ್ಟು ಎಲ್ಲಿಗೂ ಹೋಗಬೇಡ. ಈ ತೋಟದಲ್ಲಿ ಯಾವ ಬೆಳೆಯೇ ಇರಲಿ, ಅದನ್ನು ನೀನು ಯಥೇಚ್ಛವಾಗಿ ಬಳಸಬಹುದು. ಇದಕ್ಕೆ ನನ್ನ ಅಪ್ಪಣೆಯೇ ಬೇಕಿಲ್ಲ' ಎಂದ ನಂಜುಂಡಯ್ಯನು ತಾನು ಮನೆಗೆಂದು ಕಡಿದಿಟ್ಟಿದ್ದ ಬಾಳೆ ಹಣ್ಣಿನ ಗೊನೆಯೊಂದನ್ನು ತಂದು ಸೋಮುವಿನ ಕೈಗಿತ್ತನು. ಸೋಮು ಸಂತಸದಿಂದ ಕುಣಿದಾಡಿದನು. ಮಗನ ಸಂತೋಷದಲ್ಲಿ ರಂಗಪ್ಪ ಮತ್ತು ರಾಧಾ ಇಬ್ಬರೂ ಭಾಗಿಗಳಾದರು.

ನೀತಿ: ಅರಸನಾದರೂ ಆಳಿನ ಮೇಲೆ ದಯೆ ಇರಬೇಕು.

**- ಲಕ್ಷ್ಮಿ ತಿಮ್ಮಪ್ಪ, ಶಿವಮೊಗ್ಗ**